# ಊಟಿಯಲ್ಲಿನ ರಾಮಕೃಷ್ಣ ಮಠ

ವಿಜಯ ಕುಮಾರ್

**ಊಟಿಯಲ್ಲಿರುವ ಶ್ರೀರಾಮಕೃಷ್ಣ ಮಠ ನೀಲಗಿರಿ ಪರ್ವತಶ್ರೇಣಿಗಳ ಆಧ್ಯಾತ್ಮಿಕ ಆಯಾಮಕ್ಕೆ ಸಾಕ್ಷಿಯಾಗಿ ನಿಂತಿದೆ. ಅಲ್ಲಿನ ರಾಮಕೃಷ್ಣ ಮಠದ ಒಂದು ಕಿರು ಪರಿಚಯವನ್ನು ನೀಡಿರುವ ವಿಜಯ ಕುಮಾರ್ "ವಿವೇಕಪ್ರಭ" ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವರು.**

ಊಟಿ ದಕ್ಷಿಣ ಭಾರತದ ಅತ್ಯಂತ ಪ್ರಮುಖ ಗಿರಿಧಾಮ ವಾಗಿದೆ. ನೀಲಗಿರಿ ಪರ್ವತ ಶ್ರೇಣಿಗಳ ಮಧ್ಯದಲ್ಲಿರುವ ಈ ಪಟ್ಟಣ ಪ್ರವಾಸಿಗಳ ಆಕರ್ಷಕ ಕೇಂದ್ರ. ಊಟಿಯ ತಂಪು ಹವೆ, ವಿಶೇಷವಾಗಿ ಬೇಸಿಗೆಯಲ್ಲಿ, ದೇಶ ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಖುಷಿ ಕೊಡುತ್ತದೆ. ಧಾವಂತ ಬದುಕಿನಿಂದ ಮಾನಸಿಕವಾಗಿ ಬಳಲಿದ ಮನುಷ್ಯನಿಗೆ ದೂರವಾದ ಪ್ರಶಾಂತ ವಾದ ವಾತಾವರಣದಲ್ಲಿ ಮತ್ತೆ ಉತ್ಸಾಹ, ಚೈತನ್ಯಗಳು ಲಭಿಸು ತ್ತವೆ. ಆದರೆ ಈ ನೀಲಗಿರಿ ಪರ್ವತಗಳ ಬಗ್ಗೆ ಸಾಕಷ್ಟು ಜನರಿಗೆ ತಿಳಿಯದಿರುವ ಸಂಗತಿಯೆಂದರೆ, ಈ ಬೆಟ್ಟ ಗುಡ್ಡಗಳು ಆಧ್ಯಾ ತ್ಮಿಕ ಅನುಭಾವಿಗಳ ತಪೋಭೂಮಿಯಾಗಿ ಮಹತ್ವ ಪಡೆ ದಿರುವುದು.

ಈ ನೀಲಗಿರಿ ಪ್ರದೇಶ ಸುಮಾರು ೧೯ನೇ ಶತಮಾನ ದವರೆಗೂ ಬಾಹ್ಯ ಪ್ರಪಂಚದ ಗಮನವನ್ನು ಅಷ್ಟಾಗಿ ಸೆಳೆದಂತೆ ಕಾಣುವುದಿಲ್ಲ. ಪ್ರಾಯಶಃ ಇಲ್ಲಿನ ವಿಪರೀತವಾದ ಹವೆ ಹಾಗೂ ಈ ಎತ್ತರಕ್ಕೆ ತಲುಪಲು ದಟ್ಟ ಅರಣ್ಯಗಳ ಮೂಲಕ ಹಾದು ಹೋಗಬೇಕಾದ ದುರ್ಗಮ ಮಾರ್ಗ ಇದಕ್ಕೆ ಕಾರಣವಿದ್ದಿರ ಬಹುದು. ಸುಮಾರು ೭,೫೦೦ ಅಡಿ ಎತ್ತರವಿರುವ ಈ ಪಟ್ಟಣದ ಪ್ರಖ್ಯಾತ ಸರೋವರ ೧೮೨೪ರಲ್ಲಿ ನಿರ್ಮಿತವಾಯಿತೆನ್ನ ಲಾಗಿದೆ. ಈ ಸರೋವರ ಹಾಗೂ ಇಲ್ಲಿನ ಬೊಟಾನಿಕಲ್ ಗಾರ್ಡನ್ ಇಲ್ಲಿನ ಪ್ರಮುಖ ಆಕರ್ಷಣೆಗಳಾಗಿವೆ. ಊಟಿಯಿಂದ ಸುಮಾರು ೧೦ ಕಿ.ಮೀ. ದೂರದಲ್ಲಿರುವ ದೊಡ್ಡಬೆಟ್ಟ ನೀಲ ಗಿರಿ ಪರ್ವತಶ್ರೇಣಿಗಳಲ್ಲಿ ಅತ್ಯಂತ ಎತ್ತರವಾದ ಪರ್ವತವಾಗಿದೆ. ಇಲ್ಲಿಂದ ಸುತ್ತಮುತ್ತಲಿನ ಬೆಟ್ಟಗಳ, ಮೈದಾನ ಪ್ರದೇಶಗಳ ಸುಂದರ ದೃಶ್ಯ ಕಾಣಿಸುತ್ತದೆ. ಇಲ್ಲಿ ಒಂದು ದೊಡ್ಡ ದೂರ ದರ್ಶಕವನ್ನು ಅಳವಡಿಸಲಾಗಿದ್ದು ಅತ್ಯಂತ ದೂರದ ದೃಶ್ಯಗಳನ್ನು ನೋಡುವ ಸದವಕಾಶವಿದೆ. ಎತ್ತ ನೋಡಿದರೂ ಹಸುರಿನಿಂದ ಕಂಗೊಳಿಸುವ, ಭವ್ಯವಾದ ಪರ್ವತಶ್ರೇಣಿಗಳಿಂದ ಸುತ್ತುವರೆ ದಿರುವ ನೀಲಗಿರಿಯ ಪ್ರಶಾಂತ ವಾತಾವರಣ ಸಂತ ಮಹಾಪುರುಷ ರನ್ನೂ ತನ್ನತ್ತ ಸೆಳೆದಿರುವುದು ಅಷ್ಟೊಂದು ಅಚ್ಚರಿಯೇನಲ್ಲ.

ಊಟಿಯಲ್ಲಿ ಶ್ರೀರಾಮಕೃಷ್ಣ ಮಠದ ಸ್ಥಾಪನೆಗೆ ಸ್ಪಷ್ಟವಾದ ದೈವಪ್ರೇರಣೆ ದೊರಕಿದ್ದು ಶ್ರೀರಾಮಕೃಷ್ಣರ ಭಕ್ತವೃಂದದಲ್ಲಿ ಮಹಾಪುರುಷ್ ಮಹಾರಾಜ್ ಎಂದು ಕರೆಯಲ್ಪಡುವ ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಶಿವಾನಂದರಿಂದ. ೧೯೨೨ರಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಪರಮಾಧ್ಯಕ್ಷ ರಾಗಿ ಜವಾಬ್ದಾರಿಯನ್ನು ವಹಿಸಿಕೊಂಡಮೇಲೆ ಉತ್ತರ ಭಾರತ ಹಾಗೂ ದಕ್ಷಿಣ ಭಾರತದಲ್ಲಿ ರಾಮಕೃಷ್ಣ ಮಠಗಳ ಕಾರ್ಯಾ ಚರಣೆಯನ್ನು ವೀಕ್ಷಿಸಲೆಂದು ೧೯೨೬ರ ಮೇನಲ್ಲಿ ಮದ್ರಾಸಿಗೆ ಭೇಟಿಯಿತ್ತರು. ಅಲ್ಲಿ ಮಲೇರಿಯಾದಿಂದ ಅವರ ಆರೋಗ್ಯ ಹದಗೆಡಲು, ಮದ್ರಾಸಿಗೆ ಅವರ ದರ್ಶನಾರ್ಥಿಗಳಾಗಿ ಬಂದಿದ್ದ ಉದಕಮಂಡಲದ ಭಕ್ತಾದಿಗಳು ನೀಲಗಿರಿಯಲ್ಲಿನ ಪ್ರಶಾಂತ ವಾತಾವರಣದಲ್ಲಿ ಮಹಾಪುರುಷ್ ಮಹಾರಾಜರ ಆರೋಗ್ಯ ಸುಧಾರಿಸುತ್ತದೆಂದು ತಿಳಿಸಿ ಅವರೊಡನೆ ಬರಲು ಆಗ್ರಹ ಪಡಿಸು ತ್ತಾರೆ. ಕೂನೂರು ಬಳಿ ಇರುವ ಸ್ಪ್ರಿಂಗ್ ಫೀಲ್ಡ್‌ನ ಒಂದು ಬಂಗಲೆಯಲ್ಲಿ ಅವರಿಗೆ ತಂಗಲು ವ್ಯವಸ್ಥೆ ಮಾಡಲಾಗುತ್ತದೆ. ಅಲ್ಲಿನ ಸ್ಥಳೀಯರ ಭಕ್ತ್ಯಾದರಗಳಿಗೆ ಮಣಿದು ಸುಮಾರು ೫ ತಿಂಗಳ ದೀರ್ಘಕಾಲ ನೀಲಗಿರಿ ಪ್ರದೇಶದಲ್ಲಿಯೇ ಇರುತ್ತಾರೆ. ಆ ದಿನಗಳಲ್ಲಿ ಅವರು ಬರೆದ ಒಂದು ಪತ್ರದಲ್ಲಿ, "ನಾನು ಸಮುದ್ರ ಪ್ರದೇಶದಿಂದ ಸುಮಾರು ೭೦೦೦ ಅಡಿ ಎತ್ತರದ ಪ್ರದೇಶದಲ್ಲಿ ರಮಣೀಯ ಪರ್ವತರಾಜಿಗಳ ಮಧ್ಯೆ ಇದ್ದೇನೆ. ನಮಗೆ ದೊರಕಿರುವ ಮನೆಯಂತೂ ಅತ್ಯಂತ ನಿರ್ಜನವಾದ ಪ್ರದೇಶದಲ್ಲಿದೆ. ಚೊಕ್ಕಟವಾಗಿರುವ ಸುಸಜ್ಜಿತವಾದ ಮನೆ. ನಾಲ್ಕೂ ಕಡೆಯಲ್ಲಿ ಹೂವಿನ ತೋಟ. ವಿಶಾಲವಾದ ಪ್ರಾಂಗಣ. ಅನೇಕ ವಿಧವಾದ ಗಿಡಮರಗಳು, ಅಧಿಕಾಂಶ ಯೂಕಲಿಪ್ಟಸ್. ಇಲ್ಲಿಯ ಹವೆ ಆರೋಗ್ಯಕರ, ನಾನು ಚೆನ್ನಾಗಿಯೇ ಇದ್ದೇನೆ....."

ಮಹಾಪುರುಷ್ ಮಹಾರಾಜರ ಆರೋಗ್ಯ ಸುಧಾರಿಸಿದಂತೆ ಅವರ ಮನಸ್ಸೂ ಹೆಚ್ಚು ಹೆಚ್ಚು ಆತ್ಮಾನಂದದಿಂದ ತುಂಬಿರು ತ್ತಿತ್ತು. ನೀಲಗಿರಿ ಪ್ರದೇಶಕ್ಕೆ ಶ್ರೀರಾಮಕೃಷ್ಣರ ನೇರ ಶಿಷ್ಯರು ಆಗಮಿಸಿದ್ದು ಇದೇ ಮೊದಲ ಬಾರಿಯಾದ್ದರಿಂದ, ಹತ್ತಿರದ ಸ್ಥಳ ಗಳಿಂದಲೇ ಅಲ್ಲದೆ ದೂರದೂರಪ್ರದೇಶಗಳಿಂದಲೂ ದರ್ಶನಾರ್ಥಿ ಗಳು ಬರುತ್ತಿದ್ದರು. ಗುಡ್ಡಗಾಡಿನ ಜನರ ಸರಳತೆ ಮತ್ತು ಭಕ್ತಿ ಶ್ರದ್ಧೆಗಳಿಂದ ಮಹಾಪುರುಷ್ ಮಹಾರಾಜರು ಬಹಳ ಆನಂದಿತ ರಾಗುತ್ತಾರೆ. ನೀಲಗಿರಿಯ ವಾತಾವರಣ ಆಧ್ಯಾತ್ಮಿಕವಾಗಿ ಎಷ್ಟು ಉದ್ದೀಪನವಾಗಿತ್ತೆಂದರೆ ಮಹಾಪುರುಷ್ ಮಹಾರಾಜರು ಅಲ್ಲಿನ ಗಿರಿಧಾಮಗಳನ್ನು ಸುತ್ತುತ್ತ ಇಲ್ಲಿನ ಪ್ರಶಾಂತ ವಾತಾವರಣದಲ್ಲಿ ಸಾಧು ಸಂನ್ಯಾಸಿಗಳ ಸಾಧನೆಗಾಗಿ ಒಂದು ರಾಮಕೃಷ್ಣ ಆಶ್ರಮ ಇದ್ದರೆ ಎಷ್ಟು ಚೆನ್ನ ಎಂದು ಭಾವಿಸುತ್ತಿರುತ್ತಾರೆ. ಈ ವಿಷಯ ಅಲ್ಲಿನ ಭಕ್ತಾದಿಗಳಿಗೆ ತಿಳಿಯುವುದೇ ತಡ ಆ ಶೀತಲ

ಪ್ರವೇಶವಲ್ಲಿ ಆಶ್ರಮಸ್ಥಾಪನೆಗಾಗಿ ಸೂಕ್ತವಾದ ಜಾಗವೊಂದರ ಹುಡುಕಾಟದಲ್ಲಿ ತೊಡಗುತ್ತಾರೆ.

ಆಶ್ರಮದ ಸ್ಥಾಪನೆಗಾಗಿ ಆಶ್ಚರ್ಯಕರವಾದ ರೀತಿಯಲ್ಲಿ ಜಾಗ ದೊರೆತದ್ದನ್ನು ಅವರು ಈ ಸಂದರ್ಭದಲ್ಲಿ ಬರೆದ ಪತ್ರ ದಿಂದಲೇ ತಿಳಿಯುವುದೊಳ್ಳೆಯದು : "ಶ್ರೀ ಶ್ರೀ ಠಾಕೂರರ ಮಹಿಮೆ ನಿಜವಾಗಿಯೂ ಅಮೋಘವಾದದ್ದು! ಏನಾಶ್ಚರ್ಯ! ಮಠಸ್ಥಾಪನೆಗಾಗಿ ಜಾಗ ದಾನ ಮಾಡಲು ಒಬ್ಬಾತ ತಾನಾಗಿಯೇ ಮುಂದೆ ಬಂದಿದ್ದಾನೆ. ಈತನಿಗೆ ಒಂದು ದಿನ ಕನಸಿನಲ್ಲಿ ತನ್ನ ಇಷ್ಟದೇವತೆ(ಶೀತಲಾದೇವಿ)ಯಿಂದ ಆಶ್ರಮಸ್ಥಾಪನೆಗಾಗಿ ಯಾರಾದರೂ ಒಂದು ಜಾಗ ಬೇಡಿದರೆ ತಪ್ಪದೆ ಕೊಡಬೇಕೆಂದು ಆದೇಶವಾಯಿತಂತೆ. ಮಾರನೆಯದಿನ ಹಾಗೂ ಅದರ ನಂತರವೂ ಮತ್ತೆ ಮತ್ತೆ ಅದೇ ರೀತಿ ಕನಸಾಯಿತಂತೆ. ಇಲ್ಲಿನ ಭಕ್ತಾದಿಗಳು ಆತನನ್ನು ಆಶ್ರಮಕ್ಕಾಗಿ ಸ್ಥಳ ಬೇಡಲು ಹೋದಾಗ ಅವರಿಗಾಗಿಯೇ ಕಾದು ಕುಳಿತಿದ್ದ ಈ ವ್ಯಕ್ತಿಯನ್ನು ಕಂಡು ಅವರಿಗಾದ ಆನಂದ ಆಶ್ಚರ್ಯಗಳು ಅಷ್ಟಿಷ್ಟಲ್ಲ!" ತಿರುವೇಂಗಡಂ ಪಿಳ್ಳೈ ಎಂಬ ಈ ದಾನಿಯಿಂದ ಜಾಗ ದೊರಕಿದ ನಂತರ ಆಶ್ರಮ ಸ್ಥಾಪನೆಗಾಗಿ ವಿವರವಾದ ನಕ್ಷೆ ತಯಾರಾಯಿತು. ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಯಿತು. ಸಮಿತಿ ಆಯೋಜಿಸಿದ್ದ ಸಾರ್ವಜನಿಕ ಸಭೆಯೊಂದರಲ್ಲಿ ಮಹಾಪುರುಷ್ ಮಹಾರಾಜರು ಮಾತನಾಡುತ್ತ—"ಈ ಪರ್ವತ ಪ್ರದೇಶದಲ್ಲಿ ರಾಮಕೃಷ್ಣ ಮಿಷನ್ನಿನ ಶಾಖಾಕೇಂದ್ರವೊಂದನ್ನು ತೆರೆಯಬೇಕೆಂಬ ಸ್ಥಳೀಯರ ಆಂತರಿಕ ಆಗ್ರಹ ಮತ್ತು ಉತ್ಸಾಹ ನನ್ನನ್ನು ಮೂಕನನ್ನಾಗಿ ಮಾಡಿವೆ. ರಾಮಕೃಷ್ಣ ಮಿಷನ್ನಿನ ಉದ್ದೇಶ ಮತ್ತು ಕಾರ್ಯನೀತಿ ನಿಮ್ಮ ಮೇಲೆ ಇಷ್ಟೊಂದು ಪ್ರಭಾವ ಬೀರಿರುವುದನ್ನು ಕಂಡು ನನಗೆ ಆನಂದವಾಗಿದೆ. ಮಠಕ್ಕಾಗಿ ಸ್ಥಳವನ್ನು ದಾನ ಮಾಡಿರುವ ಆ ಪುಣ್ಯಾತ್ಮನಿಗೆ ನನ್ನ ವಿಶೇಷ ಅಭಿನಂದನೆಗಳು. ಭಗವಾನ್ ಶ್ರೀರಾಮಕೃಷ್ಣರ ಕೃಪಾಶೀರ್ವಾದಗಳಿಂದ ಈ ಆಶ್ರಮದಲ್ಲಿ ಸನಾತನ ಧರ್ಮ ಚಿರಕಾಲ ನೆಲೆಯೂರಿ ಜಗತ್ತಿನಲ್ಲಿ ವಿಶ್ವ ಮಾನವತೆ, ಭ್ರಾತೃಪ್ರೇಮ, ಮತ್ತು ಶಾಂತಿಸ್ಥಾಪನೆಯ ಮೂಲಕ ನಮ್ಮ ಶ್ರೀಪ್ರಭುವಿನ ನಾಮ ಎಲ್ಲೆಲ್ಲೂ ಮೊಳಗಲಿ."

ಆಶ್ರಮಕ್ಕಾಗಿ ದಾನಮಾಡಿದ ಸ್ಥಳ ಊಟಿಯ ಬಿಷಪ್‌ಟೌನ್ ಎಂಬಲ್ಲಿ, ಪರ್ವತಪ್ರದೇಶ ತುದಿಯಲ್ಲಿ, ಎಲ್ಲ ರೀತಿಯ ಶಬ್ದ ಮುಂತಾದ ಮಾಲಿನ್ಯಗಳಿಂದ ಮುಕ್ತವಾಗಿ ತಪೋಭೂಮಿಯನ್ನು ನೆನಪಿಸುವಂತಿತ್ತು. ೧೯೨೬ರ ಜುಲೈ ೧೧ರ ಶುಭ ದಿವಸ ಪೂಜಾದಿಗಳ ನಂತರ ಆಶ್ರಮದ ಭೂಮಿಪೂಜೆ ಅಥವಾ ಶಂಕು ಸ್ಥಾಪನೆಯನ್ನು ಮಹಾಪುರುಷ್ ಮಹಾರಾಜರೇ ನೆರವೇರಿಸಿದರು. ಶಂಕುಸ್ಥಾಪನೆಯ ಸಮಾರಂಭದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ಸಮಾವೇಶಗೊಂಡಿದ್ದರು. ಕಟ್ಟಡದ ನಿರ್ಮಾಣಕ್ಕೆ ಸ್ವಲ್ಪ ಸಮಯ ಬೇಕಾಗಿದ್ದರಿಂದ ತಮ್ಮ ಹಳೆಯ ವಾಸಸ್ಥಾನದಲ್ಲಿ ತಂಗಿ ಮಹಾಪುರುಷ್ ಮಹಾರಾಜರು ಅಲ್ಲಿನ ಸುತ್ತಮುತ್ತ ಹಳ್ಳಿಗಳಿಗೆ ಭೇಟಿಯಿತ್ತು, ಗುಡ್ಡಗಾಡಿನ ನಿವಾಸಿಗಳೊಂದಿಗೆ ಆತ್ಮೀಯವಾಗಿ ಬೆರೆತು ಅವರ ಆಧ್ಯಾತ್ಮಿಕ ಬದುಕಿಗೆ ಪ್ರೇರಣೆ ನೀಡುತ್ತಿದ್ದರು. ಅಷ್ಟೇ ಅಲ್ಲದೆ ಕೆಲವೊಮ್ಮೆ ಅಲ್ಲಿನ ವಿದ್ಯಾವಂತರು ಸಾರ್ವಜನಿಕ ಸಭೆಗಳನ್ನು ಆಯೋಜಿಸಿ ಆಮಂತ್ರಿಸುತ್ತಿದ್ದಾಗ ಶ್ರೀರಾಮಕೃಷ್ಣರ ಬೋಧನೆಗಳ ಕುರಿತು ಉಪನ್ಯಾಸ ನೀಡುತ್ತಿದ್ದರು. ಒಮ್ಮೆ ಕೂನೂರಿನ ಕಾಸ್ಮೋಪಾಲಿಟನ್ ಕ್ಲಬ್ಬಿನಲ್ಲಿ "ಅನುಭೂತಿ ಮತ್ತು ಧರ್ಮಸಂಪಾದನೆಯ ಸಾಧನಗಳು" ಎಂಬ ವಿಷಯವಾಗಿ ಮಾತನಾಡುತ್ತ ಧಾರ್ಮಿಕ ಚಿಂತನೆಗಳು ನಮ್ಮ ಮನದಾಳವನ್ನು ಮುಟ್ಟಬೇಕು ಎಂದು ಅಲ್ಲಿನ ಶಿಕ್ಷಿತ ವರ್ಗಕ್ಕೆ ತಿಳಿಸಿದರು.

ಮುಂದೆ ಎರಡು ವರ್ಷದ ನಂತರ ಮತ್ತೆ ಮಹಾಪುರುಷ್ ಮಹಾರಾಜರು ಊಟಿಗೆ ಬಂದಾಗ ಯುಗಾವತಾರ ಶ್ರೀರಾಮಕೃಷ್ಣರ ಭಾವಧಾರೆ ಸದೃಢವಾಗಿ ಬೇರುಬಿಡುತ್ತಿರುವುದನ್ನು ಕಂಡು ಆನಂದಿಸಿದರು. ಆಶ್ರಮದ ಕಟ್ಟಡದ ನಿರ್ಮಾಣಕಾರ್ಯ ಭರದಿಂದ ಸಾಗಿತ್ತು. ಈಗ ಮಹಾಪುರುಷ್ ಮಹಾರಾಜ್ ಅವರ ಸಾನ್ನಿಧ್ಯ ಒಂದು ಗಂಭೀರವಾದ ಆಧ್ಯಾತ್ಮಿಕ ವಾತಾವರಣವನ್ನೇ ಸೃಷ್ಟಿಸಿತು. ಈ ಸಮಯದಲ್ಲಿ ಅವರು ಎಷ್ಟು ರಾಮಕೃಷ್ಣಮಯರಾಗಿದ್ದರೆಂಬುದನ್ನು ಅವರು ಬರೆದಿದ್ದ ಒಂದು ಪತ್ರದಿಂದ ತಿಳಿಯಬಹುದು : "ನನ್ನೊಳಗೆ ಶ್ರೀರಾಮಕೃಷ್ಣರನ್ನು ಬಿಟ್ಟರೆ ಬೇರೇನಿದೆ? ನನ್ನ ಮನಸ್ಸು, ಪ್ರಾಣ, ದೇಹ ಎಲ್ಲವೂ ಅವರೇ ಆಗಿದ್ದಾರೆ. ಈ ಸಂಸಾರದಲ್ಲಿ ಜೀವಿಗಳಿಗೆ ಭಗವಂತನಲ್ಲಿ ವಿಶ್ವಾಸ, ಭಕ್ತಿ, ಪ್ರೀತಿ ಜಾಗೃತಗೊಳಿಸಲೆಂದೇ ನಮ್ಮನ್ನು ಅವರು ಜೀವಂತವಾಗಿ ಇಟ್ಟಿದ್ದಾರೆ."

ಭಕ್ತರೊಡನೆ ಇರುವಾಗ ಭಗವತ್ಸಂಬಂಧದ ಮಾತುಕತೆ ಬಿಟ್ಟರೆ ಹೆಚ್ಚಿನ ಸಮಯ ಅವರು ಧ್ಯಾನಮಗ್ನರಾಗಿರುತ್ತಿದ್ದರು ಇಲ್ಲವೇ ಅತೀಂದ್ರಿಯ ರಾಜ್ಯದಲ್ಲಿ ಮುಳುಗಿರುತ್ತಿದ್ದರು. ಒಮ್ಮೆ ಈ ರೀತಿ ಕುಳಿತಿದ್ದಾಗ ಮಹಾಪುರುಷ್ ಮಹಾರಾಜರ ಸಂನ್ಯಾಸಿ ಶಿಷ್ಯರು ಅವರ ಆರೋಗ್ಯವನ್ನು ವಿಚಾರಿಸಿದರು. ಆ ಪ್ರಶ್ನೆ ತಮಗಲ್ಲವೇನೋ ಎಂಬಂತೆ, ತಮ್ಮ ಯೋಚನೆಯಲ್ಲೇ ಮಗ್ನರಾಗಿದ್ದರು. ನಂತರ ನಿಧಾನವಾಗಿ ಗಂಭೀರವಾದ ಧ್ವನಿಯಲ್ಲಿ ಹೇಳಿದರು : "ಈ ಸ್ಥಳದಲ್ಲಿ ಎಂತಹ ಅದ್ಭುತ ಆಧ್ಯಾತ್ಮಿಕ ತರಂಗಗಳಿವೆ ಎಂದರೆ ಮನಸ್ಸು ನಿರಾಯಾಸವಾಗಿ ಅನಂತದಲ್ಲಿ ಲೀನವಾಗಲು ಬಯಸುತ್ತದೆ. ಈ ಮುಂಚೆ ನನಗಿದು ಗೊತ್ತಿರಲಿಲ್ಲ. ಆದರೆ ದಿನಗಳು ಕಳೆದಂತೆ ಅದ್ಭುತವಾದ ಆಧ್ಯಾತ್ಮಿಕ ಅನುಭವಗಳು ನನಗಾಗುತ್ತಿವೆ. ಇವೆಲ್ಲವೂ ಶ್ರೀಗುರುದೇವರ ಕೃಪೆಯೇ. ನನಗನಿಸುತ್ತದೆ ಅವರೇ ನನಗೆ ಇಂತಹ ದಿವ್ಯಾನುಭವವನ್ನು ನೀಡಲು ನನ್ನನ್ನು ಇಲ್ಲಿಗೆ ಕರೆತಂದಿದ್ದಾರೆ ಎಂದು. ... ಬಹಳ ವರ್ಷಗಳ ಹಿಂದೆ ನಾನು ಹಿಮಾಲಯದಲ್ಲಿದ್ದಾಗ ನನಗೆ ಇದೇ ರೀತಿಯ ಅನುಭವವಾಗಿತ್ತು. ಇಲ್ಲಿ ನನ್ನ ಮನಸ್ಸು ಸಹಜವಾಗಿ ಧ್ಯಾನಾಸಕ್ತವಾಗಿದೆ. ಯಾವುದೇ ಪ್ರಯತ್ನವಿಲ್ಲದೆ ಮನಸ್ಸು ಶಾಂತ ಹಾಗೂ ನಿಶ್ಚಲವಾಗುತ್ತದೆ. ಇಂದ್ರಿಯ ವ್ಯಾಪಾರಗಳಲ್ಲಿ ತೊಡಗಲು ಮನಸ್ಸನ್ನು ನಾನು ಬಲವಂತಗೊಳಿಸಬೇಕು.

ಬಹಳ ಹಿಂದೆ ನಮ್ಮ ಪ್ರಾಚೀನ ಋಷಿಮುನಿಗಳು, ಸಂತರು ಇಲ್ಲಿ ಅದ್ಭುತವಾದ ತಪಸ್ಸನ್ನು ಕೈಗೊಂಡಿರಬೇಕು. ಹಾಗಾಗಿಯೇ ಧ್ಯಾನಕ್ಕೆ ಸಹಾಯಕವಾಗುವ ಅಂತಹ ಗಂಭೀರವಾದ ಆಧ್ಯಾತ್ಮಿಕ ವಾತಾವರಣ ಈ ಪ್ರದೇಶವನ್ನು ಆವರಿಸಿದೆ. ಮೊನ್ನೆ ಬಿ.... ಮಾತನಾಡುತ್ತಿದ್ದಾಗ, ಇಲ್ಲಿನ ಕಾಡುಗಳಲ್ಲಿ ಅನೇಕ ಬಗೆಯ ಹಣ್ಣುಹಂಪಲುಗಳು ದೊರೆಯುತ್ತವೆ ಎಂದು ತಿಳಿಸಿದರು. ಇದರಿಂದ ಇಲ್ಲಿ ಸಂತರು, ಋಷಿಮುನಿಗಳು ತಪಸ್ಸನ್ನಾಚರಿಸುತ್ತಿದ್ದರೆಂದು ನಾವು ತಿಳಿಯಬಹುದಾಗಿದೆ."

ಈ ಮಾತನ್ನು ಕೇಳುತ್ತಿದ್ದ ಆ ಸಂನ್ಯಾಸಿಗಳು "ಹಾಗಾದರೆ ನಮಗೂ ಈ ರೀತಿಯ ಆಧ್ಯಾತ್ಮಿಕ ಅನುಭವಗಳಾಗುತ್ತವೆಯೇ? ನಮಗೇಕೆ ಆ ರೀತಿಯ ಆಧ್ಯಾತ್ಮಿಕ ತರಂಗಗಳಿರುವುದು ಗೊತ್ತಾಗುತ್ತಿಲ್ಲ?" ಎಂದು ಪ್ರಶ್ನಿಸಿದರು. ಅದಕ್ಕೆ ಮಹಾಪುರುಷ್ ಮಹಾರಾಜರು, "ನೋಡು ಮಗು, ಆ ರೀತಿಯ ಆಧ್ಯಾತ್ಮಿಕ ಅನುಭವಗಳನ್ನು ಭಗವಂತನೊಬ್ಬನೇ ಕೊಡಲು ಸಾಧ್ಯ. ಭಗವಂತನ ಪಾದಗಳನ್ನು ದೃಢವಾಗಿ ಹಿಡಿ. ಅವನನ್ನು ಪ್ರಾರ್ಥಿಸು. ಅವನಿಗಾಗಿ ರೋದಿಸು. ನಿನಗೆ ಅವಶ್ಯವಾದುದನ್ನು ಅವನೇ ನಿನಗೆ ಸಕಾಲದಲ್ಲಿ ಒದಗಿಸುವನು. ಅವನೇ ನಮ್ಮೆಲ್ಲರ ಮನಸ್ಸಿನ ಒಡೆಯ. ಮದವೇರಿದ ಆನೆಯಂತಿರುವ ಈ ಮನಸ್ಸನ್ನು ಭಗವಂತನು ಕೃಪೆಮಾಡಿ ಅಂತರ್ಮುಖಿಗೊಳಿಸಿದರೆ ಮಾತ್ರ ಮನಸ್ಸು ಶಾಂತವಾಗಿ, ಎಲ್ಲ ವೃತ್ತಿವ್ಯಾಪಾರಗಳು ಸ್ಥಗಿತಗೊಂಡು ಸಮಾಧಿಯಲ್ಲಿ ತಲ್ಲೀನವಾಗುತ್ತದೆ. ಮನಸ್ಸು ಸೂಕ್ಷ್ಮ ಹಾಗೂ ನಾಜೂಕಾದ ಹೊರತು ಯಾರಿಗೂ ಆಧ್ಯಾತ್ಮಿಕ ಅನುಭವವಾಗಲು ಸಾಧ್ಯವೇ ಇಲ್ಲ. ಮನಸ್ಸು ಒಂದು ದಿನದಲ್ಲಿ ಹತೋಟಿಗೆ ಬರುವಂಥದ್ದೇ? ಎಷ್ಟೊಂದು ಆಧ್ಯಾತ್ಮಿಕ ಸಾಧನೆ ಮಾಡಬೇಕು ಆ ಸೂಕ್ಷ್ಮತೆಯನ್ನು ಪಡೆಯಲು! ಮನಸ್ಸು ಅತ್ಯಂತ ಸೂಕ್ಷ್ಮವಾಗಿ ಯಾವಾಗಲೂ ಸಚ್ಚಿಂತನೆಯಲ್ಲಿ ತೊಡಗುವಂತಾದರೆ ಆಗ ಮಾತ್ರವೇ ಉನ್ನತ ಆಧ್ಯಾತ್ಮಿಕ ಸತ್ಯಗಳು ನಮ್ಮ ಗ್ರಹಿಕೆಗೆ ಬರಲು ಸಾಧ್ಯ" ಎಂದು ನುಡಿದರು.

ಅಲ್ಲಿನ ಗುಡ್ಡಗಾಡು ಜನರು ಅನೇಕ ವೇಳೆ ಸಂಕೀರ್ತನಾದಿಗಳೊಂದಿಗೆ ತಂಡ ತಂಡವಾಗಿ ಯಾವುದೋ ದೇವದರ್ಶನಕ್ಕಾಗಿ ಬರುತ್ತಿರುವರೋ ಎಂಬಂತೆ ಮಹಾಪುರುಷ್ ಮಹಾರಾಜರ ದರ್ಶನಕ್ಕಾಗಿ ಬರುತ್ತಿದ್ದರು. ಮಹಾಪುರುಷ್ ಮಹಾರಾಜ್ ಅವರೆಲ್ಲರಿಗೂ ಆಶೀರ್ವಾದ ಮಾಡಿ ಶ್ರೀರಾಮಕೃಷ್ಣರ ಪ್ರಸಾದವನ್ನು ಕೊಡುತ್ತಿದ್ದರು. ಶ್ರೀರಾಮಕೃಷ್ಣರ ಪ್ರಸಾದದ ಮಹಿಮೆ ಅದ್ಭುತವಾದದ್ದು! ಅದನ್ನು ಗ್ರಹಿಸಿದವರಲ್ಲಿ ಭಗವದ್ಭಕ್ತಿಯ ಬೀಜಾಂಕುರವಾಗುತ್ತಿತ್ತು.

ಈ ಸಮಯದಲ್ಲಿ ನಡೆದ ಒಂದು ಘಟನೆ ಉಲ್ಲೇಖಯೋಗ್ಯ. ಶ್ರೀರಾಮಕೃಷ್ಣರ ಭಾವಪ್ರಚಾರ ಅಲ್ಲಿನ ಗುಡ್ಡಗಾಡು ಜನರಲ್ಲಿ ಹರಡಿದಂತೆ ಅಲ್ಲಿ ಆ ಮುಗ್ಧ ಜನರನ್ನು ಬಲವಂತವಾಗಿ ಮತಾಂತರಗೊಳಿಸುತ್ತಿದ್ದ ಕ್ರೈಸ್ತಮಿಷನರಿಗಳಿಗೆ ಕಣ್ಣು ಕಿಸುರಾಯಿತು. ಹೀಗಾಗಿ ಅವರು ರಾಮಕೃಷ್ಣ ಮಠದ ಸಂನ್ಯಾಸಿಗಳನ್ನು ಗೌರವಿಸುತ್ತಿರಲಿಲ್ಲ. ಮಹಾಪುರುಷ್ ಮಹಾರಾಜರು ಊಟಿಯಲ್ಲಿ ಒಂದು ದಿನ ಬೆಳಗ್ಗೆ ಮತ್ತೊಬ್ಬ ಸಾಧುವಿನೊಡನೆ ಓಡಾಡಿಕೊಂಡು ಬರಲು ಹೋದರು. ಅವರ ದಾರಿಯಲ್ಲಿ ಒಬ್ಬಾಕೆ ಕ್ರೈಸ್ತ ಮಿಷನರಿ ಎದುರಾದಳು. ಆಕೆ ವಿದೇಶದವಳಂತೆ ಕಾಣುತ್ತಿದ್ದಳು. ಮಹಾಪುರುಷ್ ಮಹಾರಾಜರು ಧಾರ್ಮಿಕ ವ್ಯಕ್ತಿಗೆ ತೋರುವ ಗೌರವದಂತೆ ಕೈಮುಗಿದು ನಮಸ್ಕರಿಸಿದರು. ಆದರೆ ಆಕೆ ಸೌಜನ್ಯಕ್ಕಾದರೂ ಕೈಮುಗಿಯುವುದಿರಲಿ, ಮುಖ ತಿರುಗಿಸಿಕೊಂಡು ಜಂಭದಿಂದ ಬೀಗುತ್ತ ಹೊರಟು ಹೋದಳು. ಆಗ ಜೊತೆಯಲ್ಲಿದ್ದ ಸಂನ್ಯಾಸಿ, "ಆಕೆಗೆ ನೀವು ನಮಸ್ಕರಿಸಿದಿರಿ. ಆಕೆ ನಿಮಗೆ ಯಾವ ಗೌರವವನ್ನೂ ತೋರದೆ ಹೋದಳಲ್ಲ?" ಎಂದು ಉದ್ಗರಿಸಿದರು. ಮಹಾಪುರುಷ್ ಮಹಾರಾಜ್ ತಮ್ಮ ಧೀರ ಗಂಭೀರವಾದ ಧ್ವನಿಯಲ್ಲಿ "ಅದರಿಂದೇನಾಯಿತು? ಮಾತೃಜಾತಿಗೆ ಗೌರವವನ್ನು ತೋರಲೇಬೇಕು, ಆಕೆ ಯಾವ ದೇಶದವಳೇ ಆಗಿರಬಹುದು, ಈ ಜಗತ್ತಿನಲ್ಲಿರುವ ಎಲ್ಲ ಸ್ತ್ರೀರೂಪಗಳೂ ಆ ಜಗಜ್ಜನನಿಯದೆ" ಎಂದು ಹೇಳಿದರು.

ಎಲ್ಲ ಮತ ಧರ್ಮಗಳನ್ನು ಸಾಮರಸ್ಯದಿಂದ ಕಾಣುವ ಶಕ್ತಿ ಇರುವುದು ಆಧ್ಯಾತ್ಮಿಕತೆಯೊಂದಕ್ಕೇ. ಅಂತಹ ಆಧ್ಯಾತ್ಮಿಕ ಸಂಪತ್ತನ್ನು ಯಥೇಷ್ಟವಾಗಿ ಹೊಂದಿದ್ದ ಮಹಾಪುರುಷ್ ಮಹಾರಾಜರ ಬಳಿ ಇತರ ಮತಾವಲಂಬಿಗಳಾದ ಆಧ್ಯಾತ್ಮಿಕ ಸಾಧಕರೂ ಬರುತ್ತಿದ್ದರು. ಒಮ್ಮೆ ನೀಲಗಿರಿಯಲ್ಲಿ ಅವರು ತಂಗಿದ್ದಾಗ ಮುಸ್ಲಿಂ ಮತಕ್ಕೆ ಸೇರಿದ ದಂಪತಿಗಳು ಬಂದು ಅವರ ಆಶೀರ್ವಾದ ಪಡೆಯುತ್ತಾರೆ. ಆ ಮುಸ್ಲಿಂ ಗೃಹಿಣಿ ಕಣ್ಣೀರು ಸುರಿಸುತ್ತ ತನಗೆ ಬಾಲ್ಯದಲ್ಲಿ ಆದ ಶ್ರೀಕೃಷ್ಣನ ದರ್ಶನವನ್ನು ಮಹಾಪುರುಷ್ ಮಹಾರಾಜರಿಗೆ ವಿವರಿಸುತ್ತ ಸ್ವಯಂ ಭಗವಾನ್ ಶ್ರೀಕೃಷ್ಣನೇ ಶ್ರೀರಾಮಕೃಷ್ಣರಾಗಿ ಹುಟ್ಟಿರುವುದಾಗಿ ತನ್ನ ದೃಢವಾದ ವಿಶ್ವಾಸ ಎಂದರಹುತ್ತಾಳೆ. ಮಹಾಪುರುಷ್ ಮಹಾರಾಜ್ ಆಕೆಯ ಶ್ರದ್ಧಾಭಕ್ತಿಗಳನ್ನು ಕಂಡು ಭಾವಪರವಶರಾಗುತ್ತಾರೆ.

ಆಶ್ರಮದ ಕಟ್ಟಡದ ನಿರ್ಮಾಣ ಸಂಪೂರ್ಣಗೊಂಡಮೇಲೆ ಅಲ್ಲಿ ಶ್ರೀರಾಮಕೃಷ್ಣರ ಪ್ರತಿಷ್ಠಾಪನೆಗೋಸ್ಕರ ಭಕ್ತರೆಲ್ಲ ಕಾತರರಾಗಿದ್ದರು. ೧೯೨೬ರ ಏಪ್ರಿಲ್ ೨೪, ಶುಕ್ರವಾರದಂದು ಊಟಿಯ ಆಶ್ರಮದಲ್ಲಿ ಶ್ರೀರಾಮಕೃಷ್ಣದೇವರ ಪ್ರತಿಷ್ಠಾಪನೆಯ ನಂತರ ಎಲ್ಲರೂ ಅದರ ಪ್ರವೇಶ ಮಾಡಿದರು. ಮದ್ರಾಸ್, ಮೈಸೂರು ಮತ್ತು ಇತರೆ ಕೇಂದ್ರಗಳಿಂದ ಅನೇಕ ಸಾಧುಗಳು ಆಗಮಿಸಿದ್ದರು. ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತಾದಿಗಳ ಮೆರವಣಿಗೆಯಲ್ಲಿ ಮಹಾಪುರುಷ್ ಮಹಾರಾಜರು ತಾವು ತಂಗಿದ್ದ ಬಂಗಲೆಯಿಂದ ಪುಷ್ಪ ಚಂದನಾದಿಗಳಿಂದ ಅಲಂಕೃತವಾದ ಶ್ರೀರಾಮಕೃಷ್ಣರ ದೊಡ್ಡ ಭಾವಚಿತ್ರವೊಂದನ್ನು ಹೊತ್ತು ಆಶ್ರಮವನ್ನು ಪ್ರವೇಶ ಮಾಡಿದರು. ಜೊತೆಯಲ್ಲಿ ಅದೇ ರೀತಿ ಅಲಂಕೃತಗೊಂಡ ಶ್ರೀಮಾತೆಯವರ ಮತ್ತು ಸ್ವಾಮಿ ವಿವೇಕಾ



ಊಟಿಯ ದೇವಮಂದಿರದ ಉದ್ಘಾಟನೆಯ ಸಂದರ್ಭದಲ್ಲಿ ಭಕ್ತರೊಡನೆ ಸ್ವಾಮಿ ಶಿವಾನಂದಜಿ ಮಹಾರಾಜ್

ನಂದರ ಭಾವಚಿತ್ರಗಳೊಡನೆ ಸಾಧು ಸಂನ್ಯಾಸಿಗಳು ಹಾಗೂ ಭಕ್ತ ಸಮೂಹ ಆಶ್ರಮ ಪ್ರವೇಶ ಮಾಡಿದರು. ಆ ಪರ್ವತಪ್ರದೇಶದ ಪದ್ಧತಿಯಂತೆ ಶ್ರೀಶ್ರೀಠಾಕೂರರಿಗೆ ಕರ್ಪೂರದಾರತಿಯನ್ನು ಮಾಡಿದನಂತರ ಆಶ್ರಮದ ಪೂಜಾಗೃಹದಲ್ಲಿ ವಿಧಿಯುಕ್ತವಾದ ಪೂಜೆ ಅನ್ನ ಭೋಗಾದಿಗಳು ನಡೆದವು. ಸಮಾವೇಶಗೊಂಡಿದ್ದ ಭಕ್ತಾದಿಗಳೆಲ್ಲರಿಗೂ ಅನ್ನಸಂತರ್ಪಣೆ ಇತ್ತು. ಸಂಜೆ, ಶ್ರೀರಾಮ ನಾಮ ಸಂಕೀರ್ತನೆ, ಭಜನೆ, ಇಂಗ್ಲಿಷ್ ಮತ್ತು ತಮಿಳು ಭಾಷೆಗಳಲ್ಲಿ ಉಪನ್ಯಾಸಗಳಾದವು. ಭಕ್ತಾದಿಗಳ ಉತ್ಸಾಹವನ್ನು ನೋಡಿ ಮಹಾಪುರುಷ್ ಮಹಾರಾಜ್ ಆನಂದಿತರಾದರು.


ಪೂಜಾಮಂದಿರದಲ್ಲಿ ಪ್ರತಿಷ್ಠಿತಗೊಂಡ ಶ್ರೀಶ್ರೀಠಾಕೂರರ, ಶ್ರೀಶ್ರೀಮಾತೆಯವರ ನಿತ್ಯಪೂಜೆಗೆ ವ್ಯವಸ್ಥೆಮಾಡಿ, ಇನ್ನು ಮುಂದೆ ಈ ಮಠ ಕೈಗೊಳ್ಳಬೇಕಾದ ಸೇವಾಕಾರ್ಯಗಳ ರೂಪರೇಖೆಗಳನ್ನು ಗುರುತಿಸಿ, ಮಠವನ್ನು ನಡೆಸಿಕೊಂಡು ಹೋಗುವ ಗುರುತರ ಜವಾಬ್ದಾರಿಯನ್ನು ಮಹಾಪುರುಷ್ ಮಹಾರಾಜರು ಬೇಲೂರು ಮಠದ ಸಮರ್ಥ ಸ್ವಾಮಿಗಳಿಗೆ ವಹಿಸುತ್ತಾರೆ. ಸುಮಾರು ೫ ತಿಂಗಳು ಕಾಲ ಊಟಿಯ ಮಠದಲ್ಲಿಯೇ ತಂಗಿದ್ದು ೨೨ನೇ ಅಕ್ಟೋಬರ್ ಹೊತ್ತಿಗೆ ನೀಲಗಿರಿ ಪ್ರದೇಶದಿಂದ ಬೆಂಗಳೂರಿಗೆ ಬರುತ್ತಾರೆ. ಅವರ ನಿರ್ಗಮನಕ್ಕೆ ಸ್ವಲ್ಪ ಮುಂಚೆ ಪರ್ವತಪ್ರದೇಶಗಳಲ್ಲಿ ನಿಲ್ಲದ ಭಾರಿ ಮಳೆಯಿಂದ ಕಾವೇರಿ ಉಕ್ಕಿ ಹರಿದಾಗ ಅನೇಕರು ಸಂತ್ರಸ್ತರಾಗುತ್ತಾರೆ. ತಡಮಾಡದೆ ಮದರಾಸು ಮಠ ಕೈಗೊಂಡ ಪರಿಹಾರಕಾರ್ಯದಲ್ಲಿ ಊಟಿಯಲ್ಲಿನ ನೂತನ ಮಠವೂ ಕೈಜೋಡಿಸಿದುದನ್ನು ನೋಡಿ ಮಹಾಪುರುಷ್ ಮಹಾರಾಜರು ಸಮಾಧಾನದ ನಿಟ್ಟುಸಿರು ಬಿಡುತ್ತಾರೆ.

ಊಟಿಯಲ್ಲಿನ ರಾಮಕೃಷ್ಣ ಮಠದ ಸ್ಥಾಪನೆಯ ಇತಿಹಾಸದೊಂದಿಗೆ ಮಹಾಪುರುಷ್ ಮಹಾರಾಜರ ದಿವ್ಯಸ್ಮೃತಿ ಅವಿಭಾಜ್ಯವಾಗಿ ಬೆಸೆದುಕೊಂಡಿರುವುದು ಹೀಗೆ. ಇಂದಿಗೂ ಕೂಡ ಮಠದ ಹೊರಾಂಗಣದಲ್ಲಿ ಕುಳಿತು ಮಠವನ್ನು ಸುತ್ತುವರೆದಿರುವ ಪರ್ವತ ರಾಶಿ ಹಾಗೂ ಕಣಿವೆಗಳನ್ನು ತದೇಕ ಚಿತ್ತದಿಂದ ನೋಡುತ್ತಿದ್ದರೆ ಆ ದಿವ್ಯಸ್ಮೃತಿ ರಾಮಕೃಷ್ಣ ಭಕ್ತರಲ್ಲಿ ಮರುಕಳಿಸುತ್ತಿರುತ್ತದೆ.

ಊಟಿ ರಾಮಕೃಷ್ಣ ಮಠಕ್ಕೆ ಭೇಟಿಕೊಡುವ ಯಾರೇ ಆಗಲಿ ಅಲ್ಲಿರುವ ಸೇಂಟ್ ಥಾಮಸ್ ಸೆಮಿಟ್ರಿಯಲ್ಲಿ ಗುಡ್‌ವಿನ್‌ರ ಸ್ಮಾರಕವನ್ನು ನೋಡದೆ ಹಿಂತಿರುಗಲಾರರು. ಕಾರಣ ಗುಡ್‌ವಿನ್ ರಾಮಕೃಷ್ಣ ಆಂದೋಲನದಲ್ಲಿ ಒಂದು ವಿಶೇಷ ಸ್ಥಾನ ಪಡೆದಿದ್ದಾರೆ. ಸ್ವಾಮಿ ವಿವೇಕಾನಂದರ ವಾಣಿಯಿಂದ ಸ್ಫೂರ್ತಿ ಪಡೆದ ಎಲ್ಲರೂ ಗುಡ್‌ವಿನ್‌ಗೆ ಚಿರಋಣಿಗಳು. ಸ್ವಾಮಿ ವಿವೇಕಾನಂದರ ಉಪನ್ಯಾಸಗಳನ್ನು ಶೀಘ್ರಲಿಪಿಯಲ್ಲಿ ಬರೆದುಕೊಳ್ಳಲು ಅಮೆರಿಕದಲ್ಲಿ ಸ್ಟೆನೋ ಆಗಿ ನೇಮಕಗೊಂಡಾಗಿನಿಂದ ಸ್ವಾಮೀಜಿಯವರನ್ನು ಅವರ ಬಂಟನಂತೆ ಎಲ್ಲಿ ಹೋದರೂ ಅನುಸರಿಸುತ್ತಿದ್ದರು. ಕೊನೆಗೆ ಸ್ವಾಮೀಜಿಯವರು ಭಾರತಕ್ಕೆ ಮರಳಿದಾಗ ಅವರೊಡನೆ ಬಂದ ಆತ ಮದ್ರಾಸಿನಲ್ಲಿ ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಕೊನೆಗೆ ವೈದ್ಯರ ಸಲಹೆಯ ಮೇರೆಗೆ ಊಟಿಯಲ್ಲಿ ವಿಶ್ರಾಂತಿ ಪಡೆಯಲು ಹೋಗಿ ಅಲ್ಲೇ ಕೊನೆಯುಸಿರೆಳೆಯುತ್ತಾರೆ. ಆಲ್ಮೋರದಲ್ಲಿದ್ದ ಸ್ವಾಮೀಜಿಯವರಿಗೆ ಸಮಾಚಾರ ತಿಳಿದೊಡನೆಯೇ ಅವರು ಬರಸಿಡಿಲೆರಗಿದಂತೆ ಆಘಾತಕ್ಕೊಳಗಾಗುತ್ತಾರೆ. ಸ್ವಾಮೀಜಿಯವರು ಗುಡ್‌ವಿನ್‌ರನ್ನು ಅಷ್ಟೊಂದು ಆಳವಾಗಿ ಪ್ರೀತಿಸುತ್ತಿದ್ದರು. ಕೊನೆಗೆ ಮೂರುದಿನಗಳ ಬಳಿಕ ಹೇಗೋ ಸುಧಾರಿಸಿಕೊಂಡು ಗುಡ್‌ವಿನರ ತಾಯಿಗೆ ಸಮಾಚಾರ ತಿಳಿಸಿ ಅತ್ಯಂತ ಹೃದಯಸ್ಪರ್ಶಿಯಾದ ಸಂತಾಪಸೂಚಕ ಪತ್ರವೊಂದನ್ನು ಬರೆಯುತ್ತಾ "ಗುಡ್‌ವಿನ್‌ರನ್ನು ಕಳೆದುಕೊಂಡ ಈ ಪೃಥ್ವಿ, ಇತರರಿಗಾಗಿ ಮಾತ್ರವೇ ತಮ್ಮ ಜೀವನವನ್ನು ತೇಯುವ ಪುಣ್ಯಾತ್ಮನೊಬ್ಬನಿಂದ ವಂಚಿತವಾಗಿ ಇಂದು ಬಡವಾಗಿದೆ" ಎಂದು ತಿಳಿಸುತ್ತಾರೆ. ಅವರಿಗಾಗಿದ್ದ ನೋವು ದುಃಖವೆಲ್ಲ ಒಂದು ಚಿಕ್ಕ ಕವನದ ರೂಪದಲ್ಲಿ ಹೊರಹೊಮ್ಮುತ್ತದೆ. ಆ ಕವನವನ್ನೂ ಸ್ವಾಮೀಜಿಯವರು ಗುಡ್‌ವಿನ್‌ರ ತಾಯಿಗೆ ಕಳುಹಿಸಿಕೊಡುತ್ತಾರೆ. ಆ ಕವನವನ್ನು ಗುಡ್‌ವಿನ್‌ರ ಸ್ಮಾರಕದಲ್ಲಿ ಕೆತ್ತಲಾಗಿದೆ. ಈ ಸ್ಮಾರಕ ೧೯೬೭ರಲ್ಲಿ

ಎದ್ದು ನಿಂತಿತು. ಕ್ರಿಶ್ಚಿಯನ್ ಸಂಪ್ರದಾಯದ ಮಾದರಿಯಲ್ಲೇ ಇರುವ ಈ ಸ್ಮಾರಕದ ಉದ್ಘಾಟನೆಯನ್ನು ಕಲ್ಕತ್ತ ಮತ್ತು ಭಾರತ, ಪಾಕಿಸ್ತಾನ, ಬರ್ಮಾ ಹಾಗೂ ಸಿಲೋನ್‌ಗಳ ಅಂದಿನ ಬಿಷಪ್‌ರಾದ ಡಾ.ಲಕ್‌ದಸ ದೆ ಮೆಲ್ ಅವರು ನೆರವೇರಿಸಿರುತ್ತಾರೆ.

ನೂತನ ಸಹಸ್ರಮಾನದ ಮೊದಲ ವರ್ಷದ ಅಂದರೆ ೨೦೦೧ರ ಸೆಪ್ಟಂಬರ್‌ಗೆ ಊಟಿಯಲ್ಲಿನ ಜನತೆಗೆ ಆಧ್ಯಾತ್ಮಿಕ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ರಾಮಕೃಷ್ಣ ಮಠಕ್ಕೆ ೭೫ ವರ್ಷಗಳು ತುಂಬಿತು. ಸರಳವಾಗಿ ಆದರೆ ಅತ್ಯಂತ ಹೃದಯ ಸ್ಪರ್ಶಿ ರೀತಿಯಲ್ಲಿ ಆ ಸಮಾರಂಭವನ್ನು ಆಚರಿಸಲಾಯಿತು. ಆಶ್ರಮದಿಂದ ಸ್ವಲ್ಪ ದೂರದಲ್ಲಿರುವ ಗೋದಾವರಿ ನಿಲಯ ಎಂಬಲ್ಲಿ ಮಹಾಪುರುಷ್ ಮಹಾರಾಜ್ ಅವರು ಮೊದಲು ತಂಗಿದ್ದರಷ್ಟೇ. ಈಗ ಅದರ ಮಾಲೀಕ ಮುಸ್ಲಿಂ ಮತಕ್ಕೆ ಸೇರಿದವರಾಗಿದ್ದರೂ, ಸಾಧುಗಳೆಲ್ಲರೂ ಆ ನಿಲಯದಲ್ಲಿ ಸಮಾವೇಶಗೊಳ್ಳಲು ಸಂತೋಷದಿಂದ ಒಪ್ಪಿಗೆ ಕೊಟ್ಟ ಕಾರಣ ಅಮೃತ ಮಹೋತ್ಸವದ ಪ್ರಾರಂಭವನ್ನು ೩೦ ನೇ ಸೆಪ್ಟೆಂಬರ್ ೨೦೦೧ರಂದು ಭಾನುವಾರ ಅಲ್ಲಿಂದಲೇ ಕೈಗೊಂಡರು. ಮಹಾಪುರುಷ್ ಮಹಾರಾಜರು ಉಪಯೋಗಿಸುತ್ತಿದ್ದ ಕೋಣೆಯಲ್ಲಿ ಶ್ರೀರಾಮಕೃಷ್ಣರ, ಶ್ರೀಶಾರದಾಮಾತೆಯವರ, ಸ್ವಾಮೀಜಿಯವರ ಅಲಂಕೃತ ಭಾವಚಿತ್ರಗಳಿಗೆ ವಂದಿಸಿ ರಾಮಕೃಷ್ಣ ಮಠದ ಸಾಧು ಬ್ರಹ್ಮಚಾರಿಗಳು ಹಾಗೂ ಸುಮಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ಸಮಾವೇಶಗೊಂಡರು. ನಂತರ ಪೂಜೆ, ವೇದಘೋಷ, ಭಜನೆ, ಆರತಿ ಧ್ಯಾನಾದಿಗಳ ನಂತರ ಗೋದಾವರಿ ಮನೆಯಿಂದ ಒಂದು ಶೋಭಾಯಾತ್ರೆ ಅಥವಾ ಮೆರವಣಿಗೆಯಲ್ಲಿ ನೆರೆದಿದ್ದವರೆಲ್ಲರೂ ನಡೆದು ಆಶ್ರಮವನ್ನು ಪ್ರವೇಶಿಸಿದರು. ೭೫ ವರ್ಷಗಳ ಹಿಂದೆ ಇದೇ ರೀತಿ ನಡೆದಿರಬಹುದಾದ ಈ ಕಾರ್ಯಕ್ರಮ ಇತಿಹಾಸದ ಪುನರಾವರ್ತನೆ ಯಂತಿತ್ತು. ಅಂದು ಮಹಾಪುರುಷ್ ಮಹಾರಾಜರು ಅತ್ಯಂತ ವ್ಯಾಕುಲತೆಯಿಂದ ಆಶಿಸಿದ್ದ ವಿಶ್ವ ಭ್ರಾತೃತ್ವದ ನೆಲೆಗಟ್ಟಾದ ಆಧ್ಯಾತ್ಮಿಕತೆ ಇನ್ನೂ ಗಟ್ಟಿಮುಟ್ಟಾಗಿದೆ ಎಂದು ಸಾರಿ ಹೇಳುತ್ತಿರುವ ರಾಮಕೃಷ್ಣ ಮಠದ ಶಾಖೆಗಳಲ್ಲಿ ಒಂದಾಗಿರುವ ಊಟಿಯ ಶ್ರೀರಾಮಕೃಷ್ಣ ಮಠ ಅಧ್ಯಾತ್ಮದ ಅಮೃತ ವರ್ಷವನ್ನು ನಿರಂತರ ಹರಿಸುತ್ತಿರುವ ಒಂದು ಪ್ರಮುಖ ಕೇಂದ್ರವಾಗಿದೆ. ❑



ಊಟಿಯಲ್ಲಿನ ಶ್ರೀರಾಮಕೃಷ್ಣ ಮಂದಿರದಲ್ಲಿರುವ
ಗುರುಮಹಾರಾಜರ ಪ್ರತಿಮೆ

## 'ನಾನೆ'ಂಬ ಅಪರಾಧಿ

ತುಂಬ ಸುಂದರವಾಗಿ ಮೂರ್ತಿಯನ್ನು ತಯಾರಿಸುವವನೊಬ್ಬನಿದ್ದ. ಅವನಿಗೆ ಮೃತ್ಯುವಿನ ಭಯ. ಮೃತ್ಯುವಿನಿಂದ ತಪ್ಪಿಸಿಕೊಳ್ಳಲು ತನ್ನ ಅಪೂರ್ವ ಪ್ರತಿಭೆಯನ್ನು ಉಪಯೋಗಿಸುವ ಉಪಾಯ ಮಾಡಿದ. ಅವನು ತನ್ನದೇ ಅಸಂಖ್ಯ ವಿಗ್ರಹಗಳನ್ನು ತಯಾರಿಸಿದ. ಅವೆಲ್ಲವೂ ಸಂಪೂರ್ಣವಾಗಿ ಅವನಂತೆಯೇ ಇದ್ದವು. ಅವುಗಳನ್ನೆಲ್ಲ ಒಂದು ಸಾಲಿನಲ್ಲಿ ನಿಲ್ಲಿಸಿ, ಅವನು ಅವುಗಳ ಹಿಂದೆ ಯಾರಿಗೂ ಕಾಣದಂತೆ ಅವಿತುಕೊಂಡನು. ಯಮರಾಜನು ಅವನನ್ನು ಕರೆದುಕೊಂಡು ಹೋಗಲು ಬಂದಾಗ ನಿಜವಾದ ವ್ಯಕ್ತಿ ಯಾರೆಂದು ಅವನಿಗೆ ಗುರುತಿಸುವುದಕ್ಕೆ ಆಗದೆ, ಅವನು ಪೆಚ್ಚುಮೋರೆ ಹಾಕಿಕೊಂಡು ಹಿಂದಿರುಗಿಬಿಡುತ್ತಾನೆ ಎಂಬುದು ಆ ವ್ಯಕ್ತಿಯ ಊಹೆಯಾಗಿತ್ತು.

ಒಂದು ನಿರ್ದಿಷ್ಟವಾದ ದಿನ ಯಮರಾಜನ ಆಗಮನವಾಯಿತು. ಅವನು ಎಲ್ಲ ಮೂರ್ತಿಗಳನ್ನು ನೋಡಿದ. ಎಲ್ಲ ಒಂದೇ ರೀತಿ! ಯಾರನ್ನು ಕರೆದುಕೊಂಡು ಹೋಗಬೇಕೆಂದು ಅವನಿಗೆ ತೋಚದಾಯಿತು. ಅವನಿಗೆ ಒಂದು ಉಪಾಯ ಹೊಳೆಯಿತು. ಅವನು ಮೂರ್ತಿಗಳನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸುತ್ತ ಉದ್ಗರಿಸಿದ, "ಹೋ, ಇದರಲ್ಲಿ ಒಂದು ದೋಷವಿದೆ" ಎಂದು. ಕೂಡಲೆ ಹಿಂದೆ ಅವಿತುಕೊಂಡಿದ್ದ ವ್ಯಕ್ತಿ ಚಂಗನೆ ಹಾರಿ ಬಂದು, "ಏನು, ದೋಷವೆ? ಎಲ್ಲಿ?" ಎಂದು ಕೇಳಿದ.

"ನೀನೇ, ನಿನ್ನ 'ಅಹಂ'ಕಾರವೆ ದೋಷ! ಅದರಿಂದಾಗಿಯೇ ನೀನು ಈಗ ಸಿಕ್ಕಿಬಿದ್ದೆ. ನಡಿ, ಯಮಲೋಕಕ್ಕೆ!" ಎಂದು ಹೇಳಿ ಯಮನು ಆ ವ್ಯಕ್ತಿಯನ್ನು ಎಳೆದುಕೊಂಡು ಹೋದನು. ಮೃತ್ಯುದೇವತೆ ಬಯಸುವ ಏಕೈಕ ಅಪರಾಧಿಯೆ ಈ 'ನಾನು.' ಇದರಿಂದಾಗಿಯೆ ಈ ಜನನ-ಮರಣ ಚಕ್ರ. ನಿಜವಾದ ಆತ್ಮನಿಗೆ ಹುಟ್ಟುಸಾವುಗಳಿಲ್ಲ.

**(ಸಂಗ್ರಹ : ವಿಕಾಸ ಅಕಲವಾಡಿ, ಬೆಂಗಳೂರು)**